ಮಾಡೋದಕ್ಕೇ ನಿಂತುಬಿಟ್ಟಿದ್ದ. ಹೊಲ ಮಾಡಿದ್ರೆ ವರ್ಷಕ್ಕೆ ಎರಡು ಬೆಳಿ. ವ್ಯಾಪಾರ ವ್ಯವಾರ ಮಾಡಿದ್ರೆ ದಿನಾ ರೊಕ್ಕ ಎಣಿಸಬೋದು ಅನ್ನೋದು ಅವನ ವಾದ. ಊರುದಿರುಗ ಖಾಸೀಮನಿಂದಾಗಿ ಕೋಳಿ ಅಂಗಡಿ ಹುಸೇನವ್ವನ ಹೆಗಲಿಗೆ ಬಿದ್ದಿತ್ತು.

ಒಬ್ಬನೇ ಮಗ ಶಫಿಯನ್ನ ಸಾಲಿಗೆ ಸೇರ್ಸಿ ಅಂತ ಹುಸೇನವ್ವ ಹಠ ಮಾಡಿದ್ರೂ ಕಿವಿ ಮ್ಯಾಲ ಹಾಕಿಕೊಳ್ಳದ ಖಾಸೀಮ ಅವನನ್ನ ತನ್ನ ಜತಿಗೆ ಊರೂರಿಗೆ ಕರೆದೊಯ್ಯುತ್ತಿದ್ದ. 'ನಮ್ಮೂರಾಗೆ ಸಾಲಿ ಇಲ್ಲ, ದಿನಾ ಮೂರು ಮೈಲಿ ನಡೆದು ಹೋಗ್ಬೇಕು ಮಗ' ಅಂತಿದ್ದ. 'ಅಂದ್ರೆ ಊರಾಗಿನ ಮಕ್ಕಳು ಯಾರೂ ಹೋಗಿ ಬರೂದಿಲ್ಲೇನು?' ಹುಸೇನವ್ವ ಜಗಳಕ್ಕೆ ಬಿದ್ರೆ ಪಿಟಿಕ್ಕನ್ನದೆ ಎದ್ದು ಹೋಗಿಬಿಡ್ತಿದ್ದ.

'ಚಾ ತಗೋರಿ...' ಹೇಂಣ್ತಿ ಗಂಗವ್ವನ ಮಾತಿಗೆ ಎಚ್ಚರಾದ ಶಂಕರಪ್ಪ, 'ಇವತ್ತು ಪಂಚಾಯಿತಿ ಮೀಟಿಂಗ್ ಐತಿ, ಕಾರು ಬರೋದ್ರೊಳಗ ತಿಂಡಿ ಮಾಡು, ಊಟ ಅಲ್ಲೇ ಮಾಡ್ತೇನಿ' ಅಂದರು. ಶಂಕರಪ್ಪ ಜಿಲ್ಲಾ ಪಂಚಾತಿ ಅಧ್ಯಕ್ಷ ಆದ ಮೇಲೆ ಮನ್ಯಾಗೆ ಇರ್ತಿದ್ದುದೇ ಕಡಿಮಿ. ಊಟ, ತಿಂಡಿ ಸರ್ಯಾದ ವ್ಯಾಳೆಕ್ಕೆ ಮಾಡ್ರಿ ಅಂದ್ರೆ 'ಆತೇಳು' ಅನ್ನೋ ಒಂದೇ ಮಾತು. ಗಂಗವ್ವ ದುಸರಾ ಮಾತಾಡಂಗಿದ್ದಿಲ್ಲ.

ಗಂಗವ್ವ ತಿಂಡಿ ಮಾಡುತ್ತಾ ಹುಸೇನವ್ವನ ಚಿಂತಿ ಮಾಡಿದಳು. ಅಲ್ಲ, ಆ ಹೆಣ್ಣ ಜೀವ ಎಷ್ಟ ನೋವು ತಡ್ಕಂಡೇತು? ಶಫಿ ಯಾಕೆ ಹಂಗೆ ಮಾಡ್ತಾನ ಮೂಳ ಎಂದು ಬಯ್ದುಕೊಂಡಳು. ಹಂಗ ನೋಡಿದ್ರ ಹುಸೇನವ್ವನ ಮಗಳು ಹಸೀನಾಗೆ ಗಂಡು ಜೋಡಿಸಿದ್ದೇ ಗಂಗವ್ವ. ಬಳ್ಳಾರ್ಯಾಗ ನಂಗೆ ಗೊತ್ತಿರೋರು ಒಬ್ರದಾರ, ಅವ್ರ ಮಗ ಬಶೀರ ಅಂತ ಛಲೋ ದುಡಿಮಿ ಮಾಡ್ತಾನ, ಒಂದಸಲ ನೋಡಬೆ ಅಂದಿದ್ದಳು. ಗಂಗವ್ವನ ಮಾತಂದ್ರೆ ಮುಗೀತು, ಹುಡುಗನ್ನ ನೋಡಿದ್ದೂ ಆತು, ಮದುವಿ ಮಾಡಿದ್ದೂ ಆತು. ಮದುವಿ ಪೂರಾ ಗಂಗವ್ವನದೇ ಓಡಾಟ. ಹಸೀನಾ ಗಂಡನ ಮನಿಗೆ ಹೋಗುವಾಗ ಗಂಗವ್ವ ಮದುಮಗಳ ಉಡಿ ತುಂಬಿ, ರೇಷ್ಮಿ ಸೀರಿ ಕೊಟ್ಟು 'ನಿಮ್ ಜನದಾಗೆ ಇದೆಲ್ಲ ಮಾಡ್ತಾರೋ ಇಲ್ಲೋ ಗೊತ್ತಿಲ್ಲ ಹುಸೇನವ್ವ, ನಂಗೆ ತಿಳಿದ್ದು ನಾ ಮಾಡೇನಿ,' ಅಂದಿದ್ದಳು. ಆ ಮಾತಿಗೆ ಹಸೀನಾ, ಹುಸೇನವ್ವ ಇಬ್ಬರೂ ಅತ್ತು ಕಣ್ಣೀರಾಗಿದ್ದರು.

ಎಲ್ಲ ಸುರಳೀತ ನಡಿಯೋ ಹೊತ್ತಿಗೆ ಸಿಡಿಲಂಥ ಸುದ್ದಿ ತೆಲಿ ಮ್ಯಾಲ ಅಪ್ಪಳಿಸಿ ಹುಸೇನವ್ವನ ಬದುಕನ್ನು ಅಲ್ಲೋಲ ಕಲ್ಲೋಲ ಮಾಡಿತ್ತು. ಬನ್ನಿಕೋಡಲ್ಲಿ ಮಾವಿನ ಮರ ಗುತ್ತಿಗಿ ಹಿಡಿದಿದ್ದ ಖಾಸೀಮ ಮರ ಹತ್ತಿ ಕಾಯಿ ಕೀಳೋ ಹೊತ್ತಿನಾಗೆ ಮರದ ತುದಿಯಿಂದ ಕಾಲು ಜಾರಿ ಕೆಳಕ್ಕೆ ಬಿದ್ದಿದ್ದ. ಆಸ್ಪತ್ರಿಗೆ ಒಯ್ಯೋಕೆ ಸೈತ ಸಾಧ್ಯ ಆಗದೆ ಮರದ ಬುಡದಲ್ಲೇ ಜೀವ ಬಿಟ್ಟಿದ್ದ.

ಖಾಸೀಮ ಸತ್ತ ವಿಷಯ ಹುಸೇನವ್ವಗಷ್ಟೆ ಅಲ್ಲ, ಶಂಕರಪ್ಪ, ಗಂಗವ್ವಗೂ ಆಘಾತ ತಂದಿತ್ತು. ಮೊನ್ನಿ ಮೊನ್ನಿ ತಾನೇ ಮಗಳ ಮದುವಿ ಮಾಡಿದ್ದವ, ನಿಂತ ಕಡಿ ನಿಲ್ಲದೆ ಊರೂರು ತಿರುಗಿ ದುಡಿಮಿ ಮಾಡ್ತಿದ್ದವ ಹಿಂಗ ಏಕಾಏಕಿ ಎಲ್ಲ ಬಿಟ್ಟ ಹಾಗೇ ಬಿಟ್ಟು ಹೋದ ಅಂದ್ರ ಗತಿ ಏನು? ಹುಸೇನವ್ವ ಒಂಟಿ ಗಾಲಿ ಬಂಡಿಯಂತಾದಳು. ಮಕ್ಕಳ ಮಾರಿ ಮ್ಯಾಗಿನ ದಿಗಿಲು ಅವಳನ್ನು ಕಳವಳಕ್ಕೀಡು ಮಾಡಿತ್ತು.

ಇಡೀ ಊರಿಗೆ ಒಂದೇ ಒಂದು ಮುಸ್ಲಿಂ ಕುಟುಂಬ ಇದ್ದರೂ ಖಾಸೀಮನ ಅಂತ್ಯಸಂಸ್ಕಾರಕ್ಕೆ ಊರಿಗೆ ಊರೇ ಸೇರಿತ್ತು. ಮಂದಿ ಊರಾಗಿನ ಅವನ ಸ್ವಂತ ಹೊಲದಾಗೇ ಅವನನ್ನ ಮಣ್ಣು ಮಾಡಿ ಕಣ್ಣೀರಾದರೆ ಹುಸೇನವ್ವಳನ್ನು ಸಂಭಾಳಿಸುವಲ್ಲಿ ಗಂಗವ್ವ ಹೈರಾಣಾಗಿದ್ದಳು. 'ಹಿಂಗ ನಡಂತ್ರ ಬಿಟ್ಟು ಹ್ವಾದ್ರ ಈ ಬಾಳೇನ ಏನು ಮಾಡ್ಲಿ, ಎಲ್ಲಿಗೆ ಹೋಗ್ಲಿ' ಎಂದು ಅತ್ತದ್ದೇ ಬಂತು. ಉತ್ತರ ಕೊಡಾಕೆ ಖಾಸೀಮನಾದ್ರು ಎಲ್ಲಿದ್ದ... ಹುಸೇನವ್ವನ ಎದಿಯ ಬೇಗುದಿ ದೂರ ಮಾಡೋರಾದರೂ ಯಾರಿದ್ದರು....

ಖಾಸೀಮ ಸತ್ತ ಕೆಲವೇ ದಿನ ಶಫಿ ಲಂಗುಲಗಾಮಿಲ್ಲದ ಹರಾಮಿ ಕುದುರಿಯಂತಾದ. 'ಸ್ವಲುಪ ದಿನ ಬಳ್ಳಾರಿಗೆ ಬಂದು ಇರಬೇ' ಎಂದು ಮಗಳು ಕರೆದಳಾದಳೂ ಈ ಅಂಗಡಿ, ಕುರಿ, ಕೋಳಿ ಬಿಟ್ಟು ಎಲ್ಲೂ ಬರಾವೊಲ್ಲೆ ಎಂದು ಹಟ ಹಿಡಿದು ಕುಂತಿದ್ದಳು ಹುಸೇನವ್ವ. ಅಂಗಡಿ ಮ್ಯಾಲ ಕುಂದ್ರು ಅಂತ ಶಫಿಗೆ ಹೇಳಿದ್ರೆ 'ಆಗಲ್ಲಬೆ' ಎಂದು ಮಾರಿ ತಿರುವಿ ಹೋಗ್ತಿದ್ದ. ಹುಸೇನವ್ವ ತಾನಾ ಒಬ್ಬಳೇ ಗಟ್ಟಿ ನಿಂತು ಎಲ್ಲದರ ದೇಖರಕಿ ಮಾಡಲಾರಂಭಿಸಿದ್ದಳು.

ಕೋಳಿ ಅಂಗಡಿ ವ್ಯಾಪಾರ ಅಷ್ಟಕಷ್ಟೇ